# ಭವಿಷ್ಯದ ವಿಶ್ವಚಾಂಪಿಯನ್ ಜ್ವೆರೆವ್

ಜಾಗತಿಕ ಟೆನಿಸ್‌ಲೋಕ ಅಲೆಕ್ಸಾಂಡರ್ ಸಶಾ ಜ್ವೆರೆವ್‌ನತ್ತ ನೆಟ್ಟ ದೃಷ್ಟಿಯಿಂದ ನೋಡುತ್ತಿದೆ. ಎರಡು ವಾರಗಳ ಹಿಂದೆ ನಡೆದ 'ನಿಟ್ಟೊ ಎಟಿಪಿ ಟೂರ್' ಪ್ರಶಸ್ತಿಯನ್ನು ಗೆದ್ದು ಎದೆಯುಬ್ಬಿಸಿದ ಜ್ವೆರೆವ್, ಸದ್ಯಕ್ಕೆ ಟೆನಿಸ್‌ಪ್ರೇಮಿಗಳ ಹೊಸ ಬೆರಗು. ನಿಟ್ಟೊ ಎಟಿಪಿ ಪ್ರಶಸ್ತಿಯನ್ನು ಜ್ವೆರೆವ್ ಸುಮ್ಮನೆ ಗೆದ್ದದ್ದಲ್ಲ. ಟೆನಿಸ್ ಲೋಕದ ಇಬ್ಬರು ದಿಗ್ಗಜರನ್ನು ಒಂದೇ ಗುಕ್ಕಿನಲ್ಲಿ ಹೊಡೆದು ನೆಲಕ್ಕುರುಳಿಸಿ ಗೆದ್ದದ್ದು. ಇನ್ನೂ 21ರ ಹರೆಯದ, ಜರ್ಮನಿಯ ಸದ್ಯದ ಡಾರ್ಲಿಂಗ್ ಜ್ವೆರೆವ್, ಸೋಲಿಸಿದ್ದು ಜಗತ್ತಿನ ದೈತ್ಯ ಟೆನಿಸ್ ಆಟಗಾರರಾದ ರೋಜರ್ ಫೆಡರರ್ ಮತ್ತು ಜೊಕೊವಿಕ್‌ರನ್ನು. ಈವರೆಗೆ ಒಟ್ಟು 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದು ವಿಶ್ವದಾಖಲೆಯ ಹೊಸ್ತಿಲಲ್ಲಿ ಇರುವ ಫೆಡರರ್ ಮತ್ತು ಸದ್ಯ ವಿಶ್ವದ ನಂಬರ್ ಒನ್ ಆಟಗಾರ ಜೊಕೊವಿಕ್‌ರನ್ನು ಸೋಲಿಸುವುದು ಸುಲಭದ ಮಾತಲ್ಲ. ಜ್ವೆರೆವ್ ಈ ಇಬ್ಬರೂ ಅನುಭವಿಗಳನ್ನು ನೇರ ಸೆಟ್‌ಗಳಲ್ಲಿ ಸೋಲಿಸಿ ಪ್ರೇಕ್ಷಕರು ಮೂಗಿನ ಮೇಲೆ ಬೆರಳೇರಿಸುವಂತೆ ಮಾಡಿದ. ಕಳೆದ ವಾರ ಪತ್ರಕರ್ತರ ಜತೆ ಮಾತನಾಡಿದ ಜೊಕೊವಿಕ್, 'ಈತ ಖಂಡಿತವಾಗಿಯೂ ಭವಿಷ್ಯದ ವಿಶ್ವ ಚಾಂಪಿಯನ್' ಎಂದಿದ್ದು ಶೀಘ್ರವೇ ನಿಜವಾಗುವಂತಿದೆ. ಅದಕ್ಕೆ ತಕ್ಕಂತೆ ಎಟಿಪಿ ಟೂರ್ ವಿಜಯದ ಬೆನ್ನಲ್ಲೇ ಜ್ವೆರೆವ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 4ನೇ ಸ್ಥಾನಕ್ಕೆ ಏರಿದ್ದಾನೆ.

ರೋಜರ್ ಫೆಡರರ್‌ಗೆ ಈಗ 37ರ ಹರೆಯ. ಪುರುಷರ ಟೆನಿಸ್‌ನಲ್ಲಿ ಇಷ್ಟು ದೀರ್ಘ ಕಾಲ ಚಾಂಪಿಯನ್ ಪಟ್ಟದಲ್ಲಿ ಉಳಿದುಕೊಳ್ಳುವುದು ನಿಜಕ್ಕೂ ಕಷ್ಟ. ಜ್ವೆರೆವ್ ಚಿಕ್ಕಂದಿನಿಂದಲೇ ಈ ಫೆಡರರ್‌ನ ಅಭಿಮಾನಿ, ಐದು ವರ್ಷದವನಿದ್ದಾಗ ಇದೇ ಜ್ವೆರೆವ್, ತನ್ನ ಟೆನಿಸ್ ಆದರ್ಶವಾದ ಫೆಡರರ್ ಬಳಿಗೆ ತೆರಳಿ ಆತನ ಜೊತೆಗೆ ಫೋಟೊ ತೆಗೆಸಿಕೊಂಡಿದ್ದ, ಆತನ ಆಟೊಗ್ರಾಫ್ ಪಡೆದಿದ್ದ. 'ಟೆನಿಸ್‌ನಲ್ಲಿ ಫೆಡರರ್ ನನ್ನ ಆದರ್ಶ. ಅವರಂತೆ ನಾನಾಗಬೇಕು' ಎಂದು ಆಗಲೇ ಅಪ್ಪನ ಕಿವಿಯಲ್ಲಿ ಪಿಸುಗುಟ್ಟಿದ್ದ. ಕಳೆದ ವರ್ಷ ತನ್ನ ಆದರ್ಶ ಗುರುವನ್ನೇ ಜ್ವೆರೆವ್ ಕೆನಡಾ ಓಪನ್‌ನಲ್ಲಿ ಸೋಲಿಸಿ ದಾಖಲೆ ನಿರ್ಮಿಸಿದ.

ಫೆಡರರ್‌ಗೆ ಹೋಲಿಸಿದರೆ ಜೊಕೊವಿಕ್ ಇನ್ನಷ್ಟು ಕಠಿಣ ಸವಾಲು. ವಿಶ್ವಚಾಂಪಿಯನ್ ನಡಾಲ್‌ನನ್ನು ಕೆಳಕ್ಕೆ ತಳ್ಳಿ ನಂಬರ್ ಒನ್ ಪಟ್ಟದಲ್ಲಿರುವ ಜೊಕೊವಿಕ್ ಸದ್ಯಕ್ಕೆ ವಿಶ್ವ ಟೆನಿಸ್‌ರಂಗದ ಅದ್ಭುತ ಆಟಗಾರ. ಜ್ವೆರೆವ್ ಈಗ ತನ್ನ 21ರ ಹರೆಯದಲ್ಲಿ 10ನೇ ಎಟಿಪಿ ವಿಶ್ವಟೂರ್ ಪ್ರಶಸ್ತಿ ಗೆದ್ದಿದ್ದಾನೆ. ಆದರೆ ಜೊಕೊವಿಕ್ ಇದೇ ವಯಸ್ಸಿನಲ್ಲಿ 11 ವಿಶ್ವ ಟೂರ್ ಟ್ರೋಫಿಗಳನ್ನು ಗೆದ್ದವನು. ಜ್ವೆರೆವ್ ಇನ್ನೂ ನಾಲ್ಕು ವರ್ಷದ ಪುಟಾಣಿ ಆಗಿದ್ದಾಗ ಇದೇ ಜೊಕೊವಿಕ್ ತಮಾಷೆಗೆಂಬಂತೆ ಈತನ ಜತೆಗೆ ಟೆನಿಸ್ ಆಡಿದ್ದುಂಟು. ಮೊನ್ನೆ ನಿಟ್ಟೊ ಎಟಿಪಿ ಫೈನಲ್‌ನಲ್ಲಿ ನೇರ ಸೆಟ್‌ಗಳಲ್ಲಿ ಜ್ವೆರೆವ್ ಗೆದ್ದದ್ದನ್ನು ನೋಡಿ ಜೊಕೊವಿಕ್ ಕೂಡಾ ಕಂಗಾಲಾಗಿದ್ದ. 1995ರಲ್ಲಿ ವಿಶ್ವ ಚಾಂಪಿಯನ್ ಬೋರಿಸ್ ಬೆಕರ್ ಗೆದ್ದ ಬಳಿಕ, ಇದೇ ಮೊದಲ ಬಾರಿಗೆ ಜರ್ಮನಿಯ ಇನ್ನೊಬ್ಬ ಸೀಸನ್ ಕೊನೆಯ ಚಾಂಪಿಯನ್ ಆಗಿದ್ದಾನೆ. ಬೆಕರ್‌ನಂತೆ ಜ್ವೆರೆವ್ ಕೂಡಾ ಆಲ್‌ಕೋರ್ಟ್ ಚಾಂಪಿಯನ್. ಹಾರ್ಡ್‌ಕೋರ್ಟ್, ಆವೆಮಣ್ಣಿನ ಅಂಕಣ ಮತ್ತು ಗ್ರಾಸ್‌ಕೋರ್ಟ್ ಮೂರರಲ್ಲೂ ಈತ ಪ್ರವೀಣ. ಆದರೆ ಹಾರ್ಡ್‌ಕೋರ್ಟ್ ಈತನ ಅಚ್ಚುಮೆಚ್ಚು. ಈವರೆಗೆ ಗೆದ್ದಿರುವ 10 ಪ್ರಶಸ್ತಿಗಳಲ್ಲಿ ಆರನ್ನು ಹಾರ್ಡ್‌ಕೋರ್ಟ್‌ನಲ್ಲೇ ಗೆದ್ದಿದ್ದಾನೆ. ನಾಲ್ಕು ಆವೆಮಣ್ಣಿನ ಅಂಕಣದಲ್ಲಿ. ಗ್ರಾಸ್‌ಕೋರ್ಟ್‌ನಲ್ಲಿ ಇನ್ನಷ್ಟೇ ಪ್ರಶಸ್ತಿ ಗೆಲ್ಲಬೇಕಿದ್ದರೂ, ಎರಡು ಸಲ ಫೈನಲ್ ತಲುಪಿದ್ದ. ಒಮ್ಮೆ ಫೆಡರರ್‌ನನ್ನು ಸೋಲಿಸಿದ್ದೂ ಗ್ರಾಸ್‌ಕೋರ್ಟ್‌ನಲ್ಲೇ.

ಜ್ವೆರೆವ್ ಹುಟ್ಟಿದ್ದೇ ಟೆನಿಸ್ ಕುಟುಂಬದಲ್ಲಿ. (ಬರ್ತ್‌ಡೇ 20.4.1997) ಅಪ್ಪ ಅಲೆಕ್ಸಾಂಡರ್ ಜ್ವೆರೆವ್ (ಸೀನಿಯರ್) ಮತ್ತು ಅಮ್ಮ ಐರಿನಾ ಇಬ್ಬರೂ ಸೋವಿಯತ್ ಒಕ್ಕೂಟದ ವೃತ್ತಿಪರ ಟೆನಿಸ್ ಆಟಗಾರರಾಗಿದ್ದವರು. ಅಣ್ಣ ಮಿಶ್ಚಾ ಜ್ವೆರೆವ್ ವಿಶ್ವ ಟೆನಿಸ್ ರ‍್ಯಾಂಕಿಂಗ್‌ನಲ್ಲಿ 25ನೇ ರ‍್ಯಾಂಕ್‌ವರೆಗೆ ತಲುಪಿದವನು. ಬಾಲ್ಯದಿಂದಲೇ ಅಮ್ಮನ ಕೋಚಿಂಗ್. ಬಳಿಕ ಅಪ್ಪನ ಮಾರ್ಗದರ್ಶನ, ಅಣ್ಣನ ಜೊತೆಗೆ ಪ್ರವಾಸ ಹೋದಾಗಲೆಲ್ಲ ಸಶಾ ಜ್ವೆರೆವ್‌ಗೆ ಹಿರಿಯ ಆಟಗಾರರ ಜೊತೆಗೆ ಒಡನಾಡುವ ಅವಕಾಶ ಸಿಗುತ್ತಿತ್ತು. 13ನೇ ವಯಸ್ಸಿನಲ್ಲೇ ವೃತ್ತಿಪರ ಆಟಗಾರನಾದ ಜ್ವೆರೆವ್, ಕಳೆದ ವರ್ಷ ವಿಶ್ವ ಜ್ಯೂನಿಯರ್ ಆಸ್ಟ್ರೇಲಿಯನ್ ಗ್ರ್ಯಾನ್‌ಸ್ಲಾಮ್ ಗೆದ್ದು, ಈ ಪ್ರಶಸ್ತಿ ಗೆದ್ದ ವಿಶ್ವದ ಅತ್ಯಂತ ಕಿರಿಯ ಆಟಗಾರ ಎಂಬ ಹಿರಿಮೆ ಮೆರೆದಿದ್ದ. 20ನೇ ವಯಸ್ಸಿನಲ್ಲಿ ವಿಶ್ವದ ಟಾಪ್ 20 ಆಟಗಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ. ಹೀಗೆ 20ನೇ ವಯಸ್ಸಿನೊಳಗೆ ಟಾಪ್ ಟ್ವೆಂಟಿ ಸೇರಿದ್ದ ಇನ್ನೊಬ್ಬ ಆಟಗಾರನೆಂದರೆ ಜೊಕೊವಿಕ್ ಮಾತ್ರ.

ಅಪ್ಪ, ಅಮ್ಮ, ಅಣ್ಣನ ಜೊತೆ ಜಗತ್ತಿನ ಎಲ್ಲ ಟೆನಿಸ್ ದೇಶಗಳಿಗೆ ಪ್ರವಾಸ ಮಾಡಿರುವ ಜ್ವೆರೆವ್, ಜರ್ಮನಿ, ರಷ್ಯನ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಭುತ್ವ ಹೊಂದಿದ್ದಾನೆ. ಆಕ್ರಮಣಕಾರಿ ಬೇಸ್‌ಲೈನ್ ಆಟ ಈತನ ವೈಶಿಷ್ಟ್ಯ. ಗಂಟೆಗೆ 200 ಕಿ.ಮೀ. ವೇಗದ ಈತನ ಸರ್ವ್‌ಗಳನ್ನು ಎದುರಿಸಲು ಎದುರಾಳಿಗೆ ಎಂಟೆದೆ ಬೇಕು. ಆರು ಅಡಿ ಆರು ಇಂಚು ಎತ್ತರ ಇರುವುದರಿಂದ ಈ ಸರ್ವ್‌ಗಳ ತೀಕ್ಷ್ಣತೆಯೂ ಹೆಚ್ಚು. ಈತನ ಸರ್ವ್‌ಗಿಂತಲೂ ಸರ್ವ್‌ರಿಟರ್ನ್ ಶಕ್ತಿಶಾಲಿ. ಈ ಭವಿಷ್ಯದ ವಿಶ್ವಚಾಂಪಿಯನ್, ತನ್ನ ವೃತ್ತಿಜೀವನದಲ್ಲಿ ಇನ್ನೂ ಯಾವುದೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದಿಲ್ಲ ಎನ್ನುವುದು ಕುತೂಹಲಕರ ಸಂಗತಿ. ಬಹುಶಃ 2019ರಲ್ಲಿ ಸೀಸನ್ ಶುರುವಾಗುವಾಗಲೇ ಆ ಸುದ್ದಿಯೂ ಬರಬಹುದು.




■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65